ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 95-100
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಭಾರತದಲ್ಲಿ ಮಹಿಳಾ ಪ್ರಾತಿನಿಧ್ಯತೆ ಮತ್ತು ಮೀಸಲಾತಿ ವಿಶ್ಲೇಷಣೆ

**ನೌಶಾದ್ ಹೆಚ್**
ಸಹಾಯಕ ಪ್ರಾಧ್ಯಾಪಕರು, ಡಿಎಸ್‌ಬಿಜಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೂಡಿಗೆರೆ.

***Abstract:***
*ಸಾರ್ವಭೌಮ ಪ್ರಜಾಸತ್ತಾತ್ಮಕ ಸಮಾಜವಾದಿ ಜಾತ್ಯಾತೀತ ಗಣರಾಜ್ಯ ಸ್ವರೂಪದ ಭಾರತದ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಕಳೆದ 70 ವರ್ಷಗಳ ಅವಧಿಯಲ್ಲಿ ಸಂಸತ್ತು ಪ್ರವೇಶಿಸಿದ ಮಹಿಳೆಯ ಪ್ರಾತಿನಿಧ್ಯತೆ ಅತ್ಯಂತ ವಿರಳ ಮತ್ತು ಶೋಚನೀಯ. ರಾಜಕೀಯವೆಂಬುದು ಜವಾಬ್ದಾರಿಯುತವಾಗಿ ಪಾರದರ್ಶಕವಾಗಿ ಭ್ರಷ್ಟಾಚಾರ ರಹಿತವಾಗಿ ಹೊರಹೊಮ್ಮ ಬೇಕಾದರೆ ಮಹಿಳೆಯರ ಭಾಗವಹಿಸುವಿಕೆಯು ಮುಖ್ಯವಾಗಿದೆ ಎಂಬುವುದು ಗಾಂಧೀಜಿಯವರ ನಿಲುವು. ಈ ನಿಟ್ಟಿನಲ್ಲಿ ನೋಡುವುದಾದರೆ ಇತ್ತೀಚೆಗೆ ಸಂವಿಧಾನದ ತಿದ್ದುಪಡಿಯ ಮೂಲಕ ಸಂಸತ್ತಿನಲ್ಲಿ ಅಂಗೀಕಾರಗೊಂಡ 'ನಾರಿಶಕ್ತಿ ವಂದನಾ ವಿಧೇಯಕ–2023'ವು ಪ್ರಜಾಪ್ರಭುತ್ವದಲ್ಲಿ ಸ್ತ್ರೀಯರ ಧ್ವನಿ ಬಲಪಡಿಸುವುದರಲ್ಲಿ ಆಶಾದಾಯಕ ಬೆಳವಣಿಗೆಯನ್ನಬಹುದು. ಪ್ರಸ್ತುತ ಲೇಖನದಲ್ಲಿ ಭಾರತದಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತು ಮೀಸಲಾತಿ ವಿಶ್ಲೇಷಣೆ ಮಾಡಲಾಗಿದೆ.*

***Keywords:*** *ಲಿಂಗ ಸಮಾನತೆ, ಮಹಿಳಾ ಪ್ರಾತಿನಿಧ್ಯತೆ, ರಾಜಕೀಯ ಮೀಸಲಾತಿ, ನಾರಿಶಕ್ತಿ ವಂದನಾ ವಿಧೇಯಕ–2023*

**ಪೀಠಿಕೆ**

ಲೋಕಸಭೆ ಹಾಗೂ ರಾಜ್ಯಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 33 ರಷ್ಟು ಸ್ಥಾನ ಒದಗಿಸುವ ಮಹಿಳಾ ಮೀಸಲಾತಿ ಮಸೂದೆಯು ಉಭಯ ಸದನಗಳಲ್ಲಿ ಅಂಗೀಕಾರವಾಗಿ ರಾಷ್ಟ್ರಪತಿಯವರ ಸಹಿಯಾಗಿವೆ. 106ನೇ ಸಂವಿಧಾನ ತಿದ್ದುಪಡಿಯಾದ ಈ ಕಾಯ್ದೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರಿಗೂ ಒಳ ಮೀಸಲಾತಿಗೆ ಅವಕಾಶ ಕಲ್ಪಿಸಿದೆ. ಹಿಂದುಳಿದ ವರ್ಗಗಳ ಮಹಿಳೆಯರಿಗೆ ಒಳ ಮೀಸಲಾತಿ ಕಲ್ಪಿಸದಿದ್ದರೆ ಇದು ಕೇವಲ ಕೆಲವರ ಪಾಲಾಗುತ್ತದೆ ಎಂಬುವುದು ಪ್ರತಿಪಕ್ಷಗಳ ವಾದ. ಮುಂದಿನ ಜನಗಣತಿ ಹಾಗೂ ಕ್ಷೇತ್ರ ಮರು ವಿಂಗಡನೆ ಪ್ರಕ್ರಿಯೆ ನಡೆಯಬೇಕಿರುವುದರಿಂದ ಈ ಕಾಯಿದೆ ಜಾರಿ ವಿಳಂಭವಾಗಲಿದೆ. ಈ ಮೀಸಲಾತಿ ಜಾರಿಗೊಂಡಂದಿನಿಂದ ಮುಂದಿನ ಹದಿನೈದು ವರ್ಷಗಳವರೆಗೆ ಮೀಸಲಾತಿ ಮುಂದುವರೆಯಲಿದೆ ನಂತರ ಇದನ್ನು ವಿಸ್ತರಿಸಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಿದೆ. ಈ ಮಹಿಳಾ ಮೀಸಲಾತಿ ಕಾಯ್ದೆಯಿಂದಾಗಿ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರು ಧ್ವನಿಗೂಡಿಸಲು ಅನುಕೂಲವಾಗಲಿದೆ. ದೇಶದ ರಾಜಕೀಯ ಕ್ಷೇತ್ರದಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಹೆಚ್ಚಿಸಲು ಸಾಧ್ಯವಾಗುವುದು ಮೀಸಲಾತಿ ಮೂಲಕ ಮಾತ್ರ. ಈವರೆಗೆ ಪಂಚಾಯತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಷ್ಟೇ ಮಹಿಳೆಯರಿಗೆ ಮೀಸಲಾತಿ

***Please cite this article as:*** ನೌಶಾದ್ ಹೆಚ್. (2023). ಭಾರತದಲ್ಲಿ ಮಹಿಳಾ ಪ್ರಾತಿನಿಧ್ಯ ಮತ್ತು ಮೀಸಲಾತಿ ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(5), 95–100.

ದೊರೆತಿದೆ. ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇಕಡ 33 ರಷ್ಟು ಮೀಸಲಾತಿ ನೀಡುವ ಮಸೂದೆಯನ್ನು 1989ರಲ್ಲಿ ರಾಜೀವ್ ಗಾಂಧಿ ಅವರ ಸರಕಾರವು ರಾಜ್ಯಸಭೆಯಲ್ಲಿ ಮಂಡಿಸಿತು ಆದರೆ ಅದಕ್ಕೆ ಅನುಮೋದನೆ ಸಿಕ್ಕಿರಲಿಲ್ಲ 1992 ಮತ್ತು 1993 ರಲ್ಲಿ ಪಿ.ವಿ.ನರಸಿಂಹರಾವ್‌ರವರ ಸರ್ಕಾರವು ಸಂವಿಧಾನಕ್ಕೆ ತರಲಾದ 73 ಮತ್ತು 74ನೇ ತಿದ್ದುಪಡಿಗಳ ಮೂಲಕ ಪಂಚಾಯಿತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ರಾಜಕೀಯ ಕ್ಷೇತ್ರದಲ್ಲಿ ದೊರಕಿವೆ. ಅದರ ಪರಿಣಾಮವಾಗಿ ಈಗ ದೇಶದ ಉದ್ದಗಲಕ್ಕೂ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ 15 ಲಕ್ಷಕ್ಕೂ ಹೆಚ್ಚು ಮಹಿಳಾ ಪ್ರತಿನಿಧಿಗಳಿದ್ದಾರೆ. ಆದರೆ ಮೀಸಲಾತಿ ಇಲ್ಲದ ಭಾರತದ ಸಂಸತ್ತು ಮತ್ತು ರಾಜ್ಯದ ವಿಧಾನಸಭೆಗಳಲ್ಲಿ ಮಹಿಳಾ ಪ್ರಾತಿನಿಧ್ಯ ಅತ್ಯಂತ ಕಡಿಮೆ ಇರುವುದನ್ನು ಗಮನಿಸಬಹುದು.

**ಲೋಕಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯತೆ ಅವಲೋಕನ**

ಭಾರತದ ಪ್ರಜಾಪ್ರಭುತ್ವ ಮತ್ತು ಮಹಿಳೆ ಎಂದು ಹುಡುಕುತ್ತಾ ಹೋದರೆ ಈವರೆಗೆ ರಾಜಕಾರಣದಲ್ಲಿ ಹೆಸರು ಮಾಡಿದ ಮಹಿಳೆಯರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪ್ರಾತಿನಿಧ್ಯ ಎಷ್ಟು ಸೀಮಿತವೆಂದರೆ 543 ಸದಸ್ಯರ ಬಲ ಇರುವ ಈಗಿನ ಲೋಕಸಭೆಯಲ್ಲಿ ಮಹಿಳಾ ಸಂಸದರ ಸಂಖ್ಯೆ ಕೇವಲ 78 ಮಾತ್ರ ಅಂದರೆ ಶೇಕಡ 14.3 ಮಾತ್ರ ಇದು ಇದುವರೆಗಿನ ಲೋಕಸಭೆಯಲ್ಲಿ ಅತೀ ಹೆಚ್ಚು. ಇದೇ ಇತಿಹಾಸದ ಅತ್ಯಂತ ದೊಡ್ಡ ಸಂಖ್ಯೆಯಾಗಿದೆ. ಈ ಹಿಂದೆ ಈ ಸಂಖ್ಯೆ ಇದಕ್ಕಿಂತಲೂ ಕಡಿಮೆ ಇತ್ತು. ಪ್ರಥಮ ಲೋಕಸಭೆಯಲ್ಲಿ 499 ಸದಸ್ಯರಲ್ಲಿ ಕೇವಲ 22 ಮಹಿಳೆಯರು ಮಾತ್ರ ಗೆಲುವು ಸಾಧಿಸಿದ್ದರು. ಅಂದರೆ ಶೇಕಡ 4.4 ಮಾತ್ರ ಪ್ರಾತಿನಿಧ್ಯವಿತ್ತು. ಎರಡನೆಯ ಲೋಕಸಭಾ ಚುನಾವಣೆಯಲ್ಲಿ ಒಟ್ಟು 494 ಸದಸ್ಯರಲ್ಲಿ 27 ಮಹಿಳೆಯರು ಅಂದರೆ ಶೇಕಡ 5.4 ಮೂರನೆಯ ಲೋಕಸಭಾ ಚುನಾವಣೆಯಲ್ಲಿ ಒಟ್ಟು 494 ಸದಸ್ಯರಲ್ಲಿ 34 ಮಹಿಳೆಯರು ಅಂದರೆ 6.7 ನಾಲ್ಕನೆಯ ಲೋಕಸಭಾ ಚುನಾವಣೆಯಲ್ಲಿ ಒಟ್ಟು 523 ಸದಸ್ಯರಲ್ಲಿ 31 ಮಹಿಳೆಯರು ಅಂದರೆ 5.9%, 5ನೇ ಲೋಕಸಭಾ ಚುನಾವಣೆಯಲ್ಲಿ 521 ಸದಸ್ಯರಲ್ಲಿ 22 ಮಹಿಳೆಯರು ಅಂದರೆ 4.2%, 6ನೇ ಲೋಕಸಭಾ ಚುನಾವಣೆಯಲ್ಲಿ ಒಟ್ಟು 544 ಸದಸ್ಯರಲ್ಲಿ 19 ಮಹಿಳೆಯರು ಅಂದರೆ ಶೇಕಡ 3.4%, 7ನೇ ಲೋಕಸಭಾ ಚುನಾವಣೆಯಲ್ಲಿ ಒಟ್ಟು 544 ಸ್ಥಾನಗಳಲ್ಲಿ 28 ಮಹಿಳೆಯರು ಅಂದರೆ 5.1%, 8ನೇ ಲೋಕಸಭಾ ಚುನಾವಣೆಯಲ್ಲಿ 544 ಸ್ಥಾನಗಳಲ್ಲಿ 44 ಮಹಿಳೆಯರು ಅಂದರೆ 8.1%, 9ನೇ ಲೋಕಸಭಾ ಚುನಾವಣೆಯಲ್ಲಿ 529 ಸದಸ್ಯರಲ್ಲಿ 28 ಮಹಿಳೆಯರು ಅಂದರೆ 5.3%, 10ನೆಯ ಲೋಕಸಭಾ ಚುನಾವಣೆಯಲ್ಲಿ 59 ಸದಸ್ಯರಲ್ಲಿ 36 ಮಹಿಳೆಯರು ಅಂದರೆ 7.0%, 11ನೇ ಲೋಕಸಭಾ ಚುನಾವಣೆಯಲ್ಲಿ 541 ಸದಸ್ಯರಲ್ಲಿ 40 ಮಹಿಳೆಯರು ಅಂದರೆ 7.4%, 12ನೇ ಲೋಕಸಭಾ ಚುನಾವಣೆಯಲ್ಲಿ 545 ಸದಸ್ಯರಲ್ಲಿ 44 ಮಹಿಳೆಯರು ಅಂದರೆ 8.0%, 13ನೇ ಲೋಕಸಭಾ ಚುನಾವಣೆಯಲ್ಲಿ 543 ಸದಸ್ಯರಲ್ಲಿ 48 ಮಹಿಳೆಯರು ಅಂದರೆ 8.8%, 14ನೇ ಲೋಕಸಭಾ ಚುನಾವಣೆಯಲ್ಲಿ 543 ಸದಸ್ಯರಲ್ಲಿ 45 ಮಹಿಳೆಯರು ಅಂದರೆ 8.1%, 15ನೇ ಲೋಕಸಭಾ ಚುನಾವಣೆಯಲ್ಲಿ 543 ಸದಸ್ಯರಲ್ಲಿ 59 ಮಹಿಳೆಯರು ಅಂದರೆ ಶೇಕಡ 10.9%, 16ನೇ ಲೋಕಸಭಾ ಚುನಾವಣೆಯಲ್ಲಿ 543 ಒಟ್ಟು 61 ಮಹಿಳಾ ಸದಸ್ಯರು ಅಂದರೆ 11.2%. ರಷ್ಟು ಮಹಿಳಾ ಪ್ರಾತಿನಿಧ್ಯತೆಯನ್ನು ಕಾಣಬಹುದಾಗಿದೆ.

**ರಾಜ್ಯಸಭೆಯ ಮಹಿಳಾ ಪ್ರಾತಿನಿಧ್ಯದ ಅವಲೋಕನ**

ರಾಜ್ಯಸಭೆಯ ಮಹಿಳಾ ಪ್ರಾತಿನಿಧ್ಯತೆಯನ್ನು ಗಮನಿಸಿದರೆ ರಾಜ್ಯ ಸಭೆಯಲ್ಲಿಯೂ ಕೂಡ ಮಹಿಳೆಯರ ಪ್ರಾತಿನಿಧ್ಯತೆ ಅತ್ಯಂತ ಕಡಿಮೆಯಿದೆ. 1952ರಲ್ಲಿ ಒಟ್ಟು 219 ಸದಸ್ಯರಲ್ಲಿ 16 ಮಹಿಳೆಯರು ಅಂದರೆ 7.3%, 1957 ರಲ್ಲಿ ಒಟ್ಟು 237 ಸದಸ್ಯರಲ್ಲಿ

18 ಮಹಿಳೆಯರು ಅಂದರೆ 7.6%, 1962 ರಲ್ಲಿ ಒಟ್ಟು 238 ಸದಸ್ಯರಲ್ಲಿ 18 ಮಹಿಳೆಯರು ಅಂದರೆ 7.6%, 1967 ರಲ್ಲಿ ಒಟ್ಟು 240 ಸದಸ್ಯರಲ್ಲಿ 20 ಮಹಿಳೆಯರು ಅಂದರೆ 8.3%, 1971 ರಲ್ಲಿ ಒಟ್ಟು 243 ಸದಸ್ಯರಲ್ಲಿ 17 ಮಹಿಳೆಯರು ಅಂದರೆ 7.0%, 1977 ರಲ್ಲಿ ಒಟ್ಟು 244 ಸದಸ್ಯರಲ್ಲಿ 25 ಮಹಿಳೆಯರು ಅಂದರೆ 10.20%, 1980 ರಲ್ಲಿ ಒಟ್ಟು 244 ಸದಸ್ಯರಲ್ಲಿ 24 ಮಹಿಳೆಯರು ಅಂದರೆ 9.8%, 1985 ರಲ್ಲಿ ಒಟ್ಟು 244 ಸದಸ್ಯರಲ್ಲಿ 28 ಮಹಿಳೆಯರು ಅಂದರೆ 11.4%, 1990 ರಲ್ಲಿ ಒಟ್ಟು 245 ಸದಸ್ಯರಲ್ಲಿ 38 ಮಹಿಳೆಯರು ಅಂದರೆ 15.5%, 1996 ರಲ್ಲಿ ಒಟ್ಟು 223 ಸದಸ್ಯರಲ್ಲಿ 20 ಮಹಿಳೆಯರು ಅಂದರೆ 9.0%, 1998 ರಲ್ಲಿ ಒಟ್ಟು 223 ಸದಸ್ಯರಲ್ಲಿ 19 ಮಹಿಳೆಯರು ಅಂದರೆ 8.6%, 2006 ರಲ್ಲಿ ಒಟ್ಟು 245 ಸದಸ್ಯರಲ್ಲಿ 25 ಮಹಿಳೆಯರು ಅಂದರೆ 10.20%, 2009 ರಲ್ಲಿ ಒಟ್ಟು 245 ಸದಸ್ಯರಲ್ಲಿ 22 ಮಹಿಳೆಯರು ಅಂದರೆ 8.97%, 2014 ರಲ್ಲಿ ಒಟ್ಟು 245 ಸದಸ್ಯರಲ್ಲಿ 29 ಮಹಿಳೆಯರು ಅಂದರೆ 11.83%, 2019 ರಲ್ಲಿ ಒಟ್ಟು 238 ಸದಸ್ಯರಲ್ಲಿ 25 ಮಹಿಳೆಯರು ಅಂದರೆ 10.50% ರಷ್ಟು ಪ್ರಾತಿನಿಧ್ಯತೆಯನ್ನು ಹೊಂದಿದ್ದಾರೆ.

**ಕರ್ನಾಟಕದ ವಿಧಾನ ಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ**

ಕರ್ನಾಟಕದ ವಿಧಾನ ಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯತೆಯನ್ನು ಅವಲೋಕಿಸಿದರೆ ಶೇ.5 ರಷ್ಟು ಕೂಡ ಮಹಿಳಾ ಸದಸ್ಯರಿಲ್ಲದಿರುವುದನ್ನು ಕಾಣಬಹುದಾಗಿದೆ. 1957 ರಲ್ಲಿ ಒಟ್ಟು 179 ಸದಸ್ಯರಲ್ಲಿ 13 ಮಹಿಳೆಯರು ಅಂದರೆ 7.2%, 1962 ರಲ್ಲಿ ಒಟ್ಟು 208 ಸದಸ್ಯರಲ್ಲಿ 18 ಮಹಿಳೆಯರು ಅಂದರೆ 8.6%, 1967 ರಲ್ಲಿ ಒಟ್ಟು 216 ಸದಸ್ಯರಲ್ಲಿ 5 ಮಹಿಳೆಯರು ಅಂದರೆ 2.3%, 1972 ರಲ್ಲಿ ಒಟ್ಟು 216 ಸದಸ್ಯರಲ್ಲಿ 00 ಮಹಿಳೆಯರು ಅಂದರೆ 0%, 1978 ರಲ್ಲಿ ಒಟ್ಟು 224 ಸದಸ್ಯರಲ್ಲಿ 08 ಮಹಿಳೆಯರು ಅಂದರೆ 3.5%, 1983 ರಲ್ಲಿ ಒಟ್ಟು 224 ಸದಸ್ಯರಲ್ಲಿ 01 ಮಹಿಳೆಯರು ಅಂದರೆ 0.4%, 1985 ರಲ್ಲಿ ಒಟ್ಟು 224 ಸದಸ್ಯರಲ್ಲಿ 08 ಮಹಿಳೆಯರು ಅಂದರೆ 3.5%, 1989 ರಲ್ಲಿ ಒಟ್ಟು 224 ಸದಸ್ಯರಲ್ಲಿ 10 ಮಹಿಳೆಯರು ಅಂದರೆ 4.4%, 1994 ರಲ್ಲಿ ಒಟ್ಟು 224 ಸದಸ್ಯರಲ್ಲಿ 07 ಮಹಿಳೆಯರು ಅಂದರೆ 3.1%, 1999 ರಲ್ಲಿ ಒಟ್ಟು 224 ಸದಸ್ಯರಲ್ಲಿ 06 ಮಹಿಳೆಯರು ಅಂದರೆ 2.6%, 2004 ರಲ್ಲಿ ಒಟ್ಟು 224 ಸದಸ್ಯರಲ್ಲಿ 6 ಮಹಿಳೆಯರು ಅಂದರೆ 2.6%, 2008 ರಲ್ಲಿ ಒಟ್ಟು 224 ಸದಸ್ಯರಲ್ಲಿ 03 ಮಹಿಳೆಯರು ಅಂದರೆ 1.3%, 2013 ರಲ್ಲಿ ಒಟ್ಟು 224 ಸದಸ್ಯರಲ್ಲಿ 07 ಮಹಿಳೆಯರು ಅಂದರೆ 3.1%, 2018 ರಲ್ಲಿ ಒಟ್ಟು 224 ಸದಸ್ಯರಲ್ಲಿ 10 ಮಹಿಳೆಯರು ಅಂದರೆ 4.4%, 2023 ರಲ್ಲಿ ಒಟ್ಟು 224 ಸದಸ್ಯರಲ್ಲಿ 10 ಮಹಿಳೆಯರು ಅಂದರೆ 4.4%. ರಷ್ಟು ಮಹಿಳೆಯರ ಪ್ರಾತಿನಿಧ್ಯತೆಯನ್ನು ಕಾಣಬಹುದಾಗಿದೆ.

**ಕರ್ನಾಟಕ ವಿಧಾನ ಪರಿಷತ್ ನಲ್ಲಿ ಮಹಿಳಾ ಪ್ರಾತಿನಿಧ್ಯ**

ಕರ್ನಾಟಕ ವಿಧಾನ ಪರಿಷತ್ ನಲ್ಲಿ ಮಹಿಳಾ ಪ್ರಾತಿನಿಧ್ಯತೆಯನ್ನು ಗಮನಿಸಿದರೆ 1952–1958 ರಲ್ಲಿ ಒಟ್ಟು 63 ಸದಸ್ಯರಲ್ಲಿ 03 ಮಹಿಳೆಯರು ಅಂದರೆ 4.76%, 1959–1965 ರಲ್ಲಿ ಒಟ್ಟು 63 ಸದಸ್ಯರಲ್ಲಿ 02 ಮಹಿಳೆಯರು ಅಂದರೆ 3.17%, 1966–1972 ರಲ್ಲಿ ಒಟ್ಟು 63 ಸದಸ್ಯರಲ್ಲಿ 02 ಮಹಿಳೆಯರು ಅಂದರೆ 3.17%, 1973–1979 ರಲ್ಲಿ ಒಟ್ಟು 63 ಸದಸ್ಯರಲ್ಲಿ 03 ಮಹಿಳೆಯರು ಅಂದರೆ 4.76%, 1980–1986 ರಲ್ಲಿ ಒಟ್ಟು 63 ಸದಸ್ಯರಲ್ಲಿ 06 ಮಹಿಳೆಯರು ಅಂದರೆ 9.52%, 1987–1993 ರಲ್ಲಿ ಒಟ್ಟು 75 ಸದಸ್ಯರಲ್ಲಿ 04 ಮಹಿಳೆಯರು ಅಂದರೆ 5.33%, 1994–2000 ರಲ್ಲಿ ಒಟ್ಟು 75 ಸದಸ್ಯರಲ್ಲಿ 05 ಮಹಿಳೆಯರು ಅಂದರೆ 6.66%, 2001–2007 ರಲ್ಲಿ ಒಟ್ಟು 75 ಸದಸ್ಯರಲ್ಲಿ 05 ಮಹಿಳೆಯರು ಅಂದರೆ 6.66%, 2008–2013 ರಲ್ಲಿ ಒಟ್ಟು 75 ಸದಸ್ಯರಲ್ಲಿ 05 ಮಹಿಳೆಯರು ಅಂದರೆ 6.66%, 2013–2018 ರಲ್ಲಿ ಒಟ್ಟು 75 ಸದಸ್ಯರಲ್ಲಿ 05

ಮಹಿಳೆಯರು ಅಂದರೆ 6.66% ರಷ್ಟಿದೆ. ಅಂದರೆ ಮಹಿಳೆಯರ ಸಂಖ್ಯೆ ಕನಿಷ್ಠ ಶೇ.10 ರಷ್ಟು ಕೂಡ ಏರಿಕೆಯಾಗದಿರುವುದನ್ನು ಕಾಣಬಹುದಾಗಿದೆ.

**ಭಾರತದ ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಹೋರಾಟದ ಹಿನ್ನೋಟ**

ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳಾ ಸಮೂಹಕ್ಕೆ ಶಾಸನ ಸಭೆಗಳಲ್ಲಿ ಶೇಕಡ 33% (ಮೂರನೇ ಒಂದರಷ್ಟು ಸ್ಥಾನಗಳು)ರಷ್ಟು ಮೀಸಲಾತಿ ನೀಡುವ ಮಸೂದೆ ತಾರ್ಕಿಕ ಪ್ರಶ್ನೆಯಾಗಿ ಉಳಿದಿದೆ. ಆದರೂ ಪುರುಷಾಧಿಪತ್ಯದ ಆಡಳಿತ ವ್ಯವಸ್ಥೆಯು ಈ ಮಟ್ಟಿಗಾದರೂ ಮಹಿಳೆಯರಿಗೆ ಪ್ರಾತಿನಿಧ್ಯತೆಯನ್ನು ನೀಡಲು ಮುಂದೆ ಬಂದಿದ್ದು ಕೊಂಚಮಟ್ಟಿಗೆ ಕ್ರಾಂತಿಕಾರಕವೇ ಎನ್ನಬಹುದು.

ದಶಕಗಳ ಮಹಿಳಾ ಹೋರಾಟಗಳಲ್ಲಿ ನಿರಂತರವಾಗಿ ಪ್ರವಹಿಸಿರುವ ಒಂದು ಸಂವಿಧಾನದಲ್ಲಿ ಸಮಪಾಲು ಮತ್ತು ಘನತೆಯ ಸ್ಥಾನಮಾನ ನೀಡುವ ಮಹಿಳಾ ಪ್ರಾತಿನಿಧ್ಯದ ಹಕ್ಕು ಸಂಸತ್ತು ಹಾಗೂ ವಿಧಾನಸಭೆಗಳಲ್ಲಿ ಪಡೆಯಲು ಆಧುನಿಕ ಭಾರತಕ್ಕೆ 3–4 ದಶಕಗಳೆ ಬೇಕಾಗಿ ಬಂತು ಎಂಬ ವಾಸ್ತವವನ್ನು ನಾವು ಒಪ್ಪಿಕೊಳ್ಳಲೇಬೇಕು. ಆದರೆ ಈ ಮಸೂದೆ ಯಾವುದೇ ರಾಜಕೀಯ ಪಕ್ಷದ ಅಥವಾ ಚಿಂತನೆಯ ಫಲವಲ್ಲ, 1996ರಲ್ಲಿ ಮಂಡನೆಯಾದ ಈ ಮಸೂದೆಯನ್ನು ಜಾರಿಗೊಳಿಸುವ ಪ್ರಯತ್ನಗಳು ಆ ನಂತರದ ಸರಕಾರಗಳ ಅವಧಿಯಲ್ಲೂ ನಡೆಯಿತು ಆದರೆ ಸ್ಥಾಪಿತ ವ್ಯವಸ್ಥೆಯ ವಾರಸುದಾರರಂತೆ ವರ್ತಿಸುವ ಪಿತೃಪ್ರಧಾನ ಪರಿಚಾಲಕರು ಪ್ರತಿ ಬಾರಿಯೂ ಕ್ರಿಯೆಗೆ ಇಳಿಯದಂತೆ ಮಾಡುವಲ್ಲಿ ಸಫಲರಾಗಿರುವುದು ಚರಿತ್ರೆಯ ವಿಪರ್ಯಾಸವೇ ಸರಿ.

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲೂ ಮಹಿಳೆಯರಿಗೆ ಶೇಕಡ 33 ರಷ್ಟು ಮೀಸಲಾತಿ ನೀಡಬೇಕು ಎಂಬುದು ಇಂದಿನ ಬೇಡಿಕೆ ಅಲ್ಲ ಇದೇ ಮೊದಲ ಪ್ರಯತ್ನವೂ ಅಲ್ಲ ಮಹಾರಾಷ್ಟ್ರದ ಸಂಸದೆಯಾಗಿದ್ದ ಪ್ರಮೀಳಾ ದಂಡಾವತಿ ಅವರು 1996ರಲ್ಲಿ ಮಹಿಳಾ ಮೀಸಲಾತಿ ಖಾಸಗಿ ಮಸೂದೆಯನ್ನು ಮೊದಲ ಬಾರಿ ಮಂಡಿಸಿದ್ದರು. 1996ರಲ್ಲಿ ಎಚ್.ಡಿ ದೇವೇಗೌಡ ಅವರ ನೇತೃತ್ವದ ಸಂಯುಕ್ತ ರಂಗ ಸರ್ಕಾರ ಮಸೂದೆಯನ್ನು ಮೊದಲ ಬಾರಿ ಲೋಕಸಭೆಯಲ್ಲಿ ಮಂಡಿಸಿತ್ತು. ಮಸೂದೆಯನ್ನು ಜಂಟಿ ಸದನ ಸಮಿತಿಗೆ ಒಪ್ಪಿಸಿ ಸಮಿತಿ ವರದಿ ನೀಡಿತ್ತು. ಆದರೆ ಆ ಲೋಕಸಭೆಯ ವಿಸರ್ಜನೆಯಾದ ಕಾರಣ ಮಸೂದೆಯು ಬಿದ್ದು ಹೋಯಿತು ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರಕಾರ ಅಂತದ್ದೇ ಮಸೂದೆಯನ್ನು 1998, 1999, 2002, 2003ರಲ್ಲಿ ಮಂಡಿಸಿತು 2004ರಲ್ಲಿ ಯುಪಿಎ–1 ಸರ್ಕಾರ ಮತ್ತೆ ಮಸೂದೆಯನ್ನು ಮಂಡಿಸಿತ್ತು ಐದು ಬಾರಿ ಮಸೂದೆಗೆ ಅನುಮೋದನೆ ಸಿಕ್ಕಿರಲಿಲ್ಲ. 2008ರ ಮೇನಲ್ಲಿ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ–1 ಸರಕಾರ ಮತ್ತೆ ಮಸೂದೆಯನ್ನು ಮಂಡಿಸಿ ಸಂಸದೀಯ ಸ್ಥಾಯಿ ಸಮಿತಿಗೆ ಒಪ್ಪಿಸಲಾಗಿತ್ತು, 2009 ಡಿಸೆಂಬರ್ ನಲ್ಲಿ ಹಲವು ಬದಲಾವಣೆಗಳೊಂದಿಗೆ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿತ್ತು 2010ರ ಮಾರ್ಚ್ ಹತ್ತರಂದು ಮಸೂದೆಗೆ ರಾಜ್ಯಸಭೆಯು ಅನುಮೋದನೆ ನೀಡಿತ್ತು ಆದರೆ ಮಸೂದೆಯಲ್ಲಿನ ಹಲವು ಅಂಶಗಳಿಗೆ ಯುಪಿಎ ಮಿತ್ರ ಪಕ್ಷಗಳು ಮತ್ತು ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದ್ದವು ಮತ್ತು ಹಲವು ಬದಲಾವಣೆಗಳಿಗೆ ಆಗ್ರಹಿಸಿದ್ದವು. ಈ ಕಾರಣದಿಂದ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲೇ ಇಲ್ಲ 2014ರ ಲೋಕಸಭೆ ವಿಸರ್ಜನೆಯಾದ ಕಾರಣ 2014ರಲ್ಲಿ ಅಧಿಕಾರಕ್ಕೆ ಬಂದ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಎನ್.ಡಿ.ಎ ಸರ್ಕಾರವು ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಿ ಮೀಸಲಾತಿಯನ್ನು ಜಾರಿಗೆ ತರುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಮೋದಿ ನೇತೃತ್ವದ ಮೊದಲ ಎನ್‌ಡಿಎ ಸರ್ಕಾರ ಆ

ಪ್ರಯತ್ನ ಮಾಡಿರಲಿಲ್ಲ. ಆದರೆ ಈ ಭಾರಿ ಮಂಡಿಸಿ ಕಾಯ್ದೆಯಾಗಿ ರೂಪುಗೊಂಡಿದೆ ಆದರೆ ಜನಗಣತಿ ಮತ್ತು ಕ್ಷೇತ್ರ ಮರುವಿಂಗಡಣೆ ಎಂಬ ತಾಂತ್ರಿಕ ಪ್ರಕ್ರಿಯೆಗಳ ಕಾರಣದಿಂದ ಮಹಿಳಾ ಮೀಸಲಾತಿ ಜಾರಿಗೆ ಬರುವುದು ವಿಳಂಬವಾಗಬಹುದು.

**ವಿಮರ್ಶೆ**

ಮಹಿಳಾ ಮೀಸಲು ಮಸೂದೆಗೆ ಸಂಸತ್ತಿನ ಉಭಯ ಸದನಗಳು ಅಂಗೀಕಾರದ ಮುದ್ರೆಯನ್ನು ಒತ್ತಿ ರಾಷ್ಟ್ರಪತಿ ಸಹಿ ಹಾಕಿ ಕಾಯ್ದೆಯಾಗಿ ರೂಪುಗೊಂಡಿರುವುದರಿಂದ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳಾ ಪ್ರಾತಿನಿಧ್ಯದ ಹಾದಿ ಸುಗಮವಾಗಿದೆ ಆದರೆ ಗುರಿ ತಲುಪಲು ಇನ್ನೂ ತುಂಬಾ ಕಾಲಾವಕಾಶ ಬೇಕಾಗಬಹುದು. ಕಾರಣ 2026 ರಲ್ಲಿ ನಡೆಯಲಿರುವ ಜನಗಣತಿ ತದನಂತರ ನಡೆಯಲಿರುವ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಪ್ರಕ್ರಿಯೆಯ ನಂತರ ಮಹಿಳಾ ಮೀಸಲಾತಿಯನ್ನು ಜಾರಿಗೊಳಿಸುವುದೇ ಆದರೆ 2029ರ ಚುನಾವಣೆಯನ್ನು ದಾಟಿ ಹೋಗುವ ಸಾಧ್ಯತೆಯೇ ಹೆಚ್ಚು.

ಮಹಿಳಾ ಮೀಸಲಾತಿ ಮಸೂದೆಯನ್ನು ಕೇಂದ್ರ ಸರಕಾರ ಸಂಸತ್ತಿನಲ್ಲಿ ಮಂಡಿಸಿ ಉಭಯ ಸದನಗಳಲ್ಲಿ ಅನುಮೋದನೆ ಪಡೆದು ಮೂಲತಃ ಅಡ್ಡಿಯಾಗಬಹುದಾಗಿದ್ದ ಈ ಸಾಂಸ್ಥಿಕ ತಡೆಗೋಡೆಯನ್ನು ದಾಟಿದ ನಂತರವು ಇನ್ನೂ ಏಳು ವರ್ಷಗಳು ಕಾಯಬೇಕಿರೋದು ಯಾವ ಕಾರಣಕ್ಕಾಗಿ ಎಂಬ ಪ್ರಶ್ನೆ ಮೂಡಿದೆ.

2014ರಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ತನ್ನ ಪ್ರಣಾಳಿಕೆಯಲ್ಲಿ ಆಶ್ವಾಸನೆ ನೀಡಿದಂತೆ ಬಿಜೆಪಿ ನೇತೃತ್ವದ ಈ ಸರಕಾರ ಮಸೂದೆ ಮಂಡಿಸಿದ್ದಲ್ಲಿ ಈ ವೇಳೆಗೆ ಒಂದು ನಿರ್ಣಾಯಕ ಹಂತ ತಲುಪಬಹುದಿತ್ತು ಆದರೆ 9 ವರ್ಷ ಮೌನವಹಿಸಿ 2024ರ ಚುನಾವಣೆಗೆ ಮುನ್ನ ಮಸೂದೆಯನ್ನು ಮಂಡಿಸಿರುವುದು ಪಕ್ಷದ ರಾಜಕೀಯ ಚಾಣಾಕ್ಷತನವನ್ನು ತೋರಿಸುತ್ತದೆ. ಮಹಿಳೆಯರಿಗೆ ರಾಜಕೀಯ ಅಧಿಕಾರ ಮತ್ತು ಪ್ರಾತಿನಿಧ್ಯ ನೀಡಬಹುದಾದ ಈ ಮಸೂದೆ ತಾತ್ವಿಕವಾಗಿ ನಮ್ಮ ಮುಂದಿದ್ದರೂ ವಾಸ್ತವವಾಗಿ ಇದು ಪುರುಷಾಧಿಪತ್ಯದ ಬುಡವನ್ನು ಸದ್ಯಕ್ಕಂತೂ ಅಲುಗಾಡಿಸುವುದಿಲ್ಲ.

ಎಲ್ಲಕ್ಕಿಂತ ಹೆಚ್ಚಾಗಿ ಮಸೂದೆ ಅಂಗೀಕಾರಗೊಂಡ ನಂತರ ನಡೆಯುವ ಮೊದಲ ಜನಗಣತಿಯ ಆಧಾರದಲ್ಲಿ ಕ್ಷೇತ್ರ ಪುನರ್‌ವಿಂಗಡನೆ ಪ್ರಕ್ರಿಯೆಯನ್ನು ನಡೆಸಿದ ಬಳಿಕವಷ್ಟೇ ಈ ಮೀಸಲು ಸೌಲಭ್ಯ ಅನುಷ್ಠಾನಕ್ಕೆ ಬರಲಿದೆ ಮಹಿಳಾ ಮೀಸಲಾತಿ ಮಸೂದೆಯು ಸ್ವಾಗತ ಎಂಬುದರಲ್ಲಿ ಎರಡು ಮಾತಿಲ್ಲ ಆದರೆ ಇದೇ ಸಂದರ್ಭದಲ್ಲಿ ಮಸೂದೆ ಕುರಿತು ಹಲವು ಪ್ರಶ್ನೆಗಳು ಕಾಡುತ್ತಿವೆ.

ಈ ಮಸೂದೆಯ ವಿಷಯವಾಗಿ ಸರ್ಕಾರ ಇಷ್ಟೊಂದು ಸುದೀರ್ಘ ಅವಧಿಯವರೆಗೆ ಏನೂ ಮಾಡದೆ ಸುಮ್ಮನಿದ್ದು ಈಗ ಏಕಾಏಕಿ ಮಂಡಿಸಿದ್ದು ಯಾಕೆ?. ಲೋಕಸಭಾ ಚುನಾವಣೆ ಹತ್ತಿರದಲ್ಲಿರುವಾಗ ವಿಶೇಷ ಅಧಿವೇಶನ ಕರೆದು ಮಸೂದೆ ಮಂಡಿಸಲು ಕಾರಣವೇನು? ಚುನಾವಣಾ ಲಾಭದ ಲೆಕ್ಕಾಚಾರವೇ ಈ ನಡೆಗೆ ಕಾರಣ ಎನ್ನುವುದು ಎದ್ದು ಕಾಣುವ ಅಂಶವಾದರೂ ಇದರಿಂದ ಮಸೂದೆ ಮಹತ್ವವೇನು ಕಡಿಮೆಯಾಗುವುದಿಲ್ಲ.

ಮೀಸಲು ಅನುಷ್ಠಾನವೇ ಇಲ್ಲಿರುವ ಅತ್ಯಂತ ಪ್ರಮುಖ ಪ್ರಶ್ನೆ ಸದ್ಯದ ಸನ್ನಿವೇಶದಲ್ಲಿ ಈ ಮಸೂದೆಯು ಮಹಿಳೆಯರಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಲು ತಾತ್ವಿಕವಾಗಿ ಒಪ್ಪಿಗೆ ನೀಡುತ್ತದೆ ಅಷ್ಟೇ. ತಕ್ಷಣದಲ್ಲಿ ಅದು ಅನುಷ್ಠಾನಕ್ಕೆ ಬರುವುದಿಲ್ಲ ಮುಂದಿನ ಜನಗಣತಿ ಮುಗಿದು ಅದರ ಆಧಾರದ ಮೇಲೆ ಕ್ಷೇತ್ರ ಪುನರ್‌ವಿಂಗಡಣೆಯಾದ ಬಳಿಕವಷ್ಟೇ ಮಹಿಳೆಯರಿಗೆ ಮೀಸಲು ಸೌಲಭ್ಯ ಸಿಗಲಿದೆ. ಮುಂದಿನ ಜನಗಣತಿ ಯಾವಾಗ ಎನ್ನುವುದು ಇನ್ನೂ ನಿಶ್ಚಿತವಿಲ್ಲ ಅಲ್ಲದೆ ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆ

ವಿವಾದವಿಲ್ಲದೆ ನಡೆಯುತ್ತವೆ ಎಂಬ ನಿರೀಕ್ಷೆಯೂ ಇಲ್ಲ.

ಹೀಗಾಗಿ ಮುಂದಿನ ಕೆಲವು ವರ್ಷಗಳವರೆಗೆ ಮೀಸಲು ಸೌಲಭ್ಯ ದಕ್ಕುವುದಿಲ್ಲ ಅದುವರಿಗೂ ಮೀಸಲು ಅನುಷ್ಠಾನಗೊಳ್ಳುವುದು ಅನುಮಾನ ಎಂಬ ಮಾತುಗಳು ಕೇಳಿ ಬರುತ್ತಿವೆ. ಆ ವೇಳೆಗೆ ಸದ್ಯದ ಶಾಸನ ರಚನೆ ಪ್ರಕ್ರಿಯೆಯಲ್ಲಿಯೂ ಹಲವು ಮಾರ್ಪಾಡುಗಳು ಆಗಿರಲಿಕ್ಕೂ ಸಾಕು ಹೀಗಾಗಿ ಮಹಿಳಾ ಮೀಸಲಾತಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಸರ್ಕಾರ ಮತ್ತು ಶಾಸನ ರಚನಾ ಪ್ರಕ್ರಿಯೆಯಲ್ಲಿ ಭಾಗಿಯಾಗಿರುವ ರಾಜಕೀಯ ಪಕ್ಷಗಳು ತಮ್ಮ ಬದ್ಧತೆಯನ್ನು ಪ್ರದರ್ಶಿಸಬೇಕಿದೆ.

**ಪರಾಮರ್ಶನ ಗ್ರಂಥಗಳು**


- Deekshith Kumar M. (2019). The Role of Women in Karnataka State Legislative Council. *Journal of Emerging Technologies and Innovative Research.* 6(4). 623-628
- Election Commission of India. (n.d.). *Statistical Report - Election Commission of India*. https://www.eci.gov.in/files/category/64-statistical-report/
- Heggade. D. O (2007). Women Political Representation in India. Arjun Publishing House.
- Iyer, L., Mani, A., Mishra, P., & Topalova, P. (2012). The Power of Political Voice: Women's political representation and crime in India. *American Economic Journal: Applied Economics*, *4*(4), 165–193. https://doi.org/10.1257/app.4.4.165
- Prakash. O (2011). 'Challenges of Women's Political Participation in India'. National Law University: Rajasthan